ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೧೭ನೇ ಮೇ ೧೯೮೮ ವೈಶಾಖ ೨೭, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮೈಸೂರಿನಲ್ಲಿರುವ ಚೆಲುವಾಂಬ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು

೧೫೬೯. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಕೃಷ್ಣ ರಾಜೇಂದ್ರ ಆಸ್ಪತ್ರೆ, ಚೆಲುವಾಂಬ ಹಾಗೂ ಮಕ್ಕಳ ಆಸ್ಪತ್ರೆಯಲ್ಲಿ ಮೂರು ವರ್ಷಕ್ಕಿಂತ ಮೇಲ್ಪಟ್ಟು ಎಷ್ಟು ಮಂದಿ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ ?

ಆ) ಇವರುಗಳಲ್ಲಿ ಪುರುಷ ವೈದ್ಯರು ಹಾಗೂ ಮಹಿಳಾ ವೈದ್ಯರುಗಳು ಎಷ್ಟು ?

ಇ) ಈ ಮೂರು ವರ್ಷಗಳಲ್ಲಿ ಒಂದು ಬಾರಿ ಈ ಆಸ್ಪತ್ರೆಗಳಿಂದ ವರ್ಗವಾಗಿ ಮತ್ತೆ ಅದೇ ಆಸ್ಪತ್ರೆಗೆ ಪುನಃ ಬಂದಿರುವ ವೈದ್ಯರುಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ೯೦

ಆ) (೧) ಪುರುಷ ವೈದ್ಯರು ... ೭೦

ಮಹಿಳಾ ವೈದ್ಯರು ... ೨೦

ಇ) ಯಾರೂ ಇಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಕೃಷ್ಣ ರಾಜೇಂದ್ರ ಆಸ್ಪತ್ರೆಯಲ್ಲಿ ಮೂರು ವರ್ಷಗಳಿಗೂ ಮೇಲ್ಪಟ್ಟು ಸುಮಾರು ೯೦ ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಮಂದಿ ವೈದ್ಯರು ಮೂರು ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡುತ್ತಿದ್ದಾರೆಂದು ತಿಳಿಸುವರೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮೂರು ವರ್ಷಗಳಿಗೂ ಮೇಲ್ಪಟ್ಟು ಎಷ್ಟೆಷ್ಟು ಜನ ಕೆಲಸ ಮಾಡುತ್ತಿದ್ದಾರೆಂದು ನಾನು ನನ್ನ ಉತ್ತರದಲ್ಲಿ ಹೇಳಿದ್ದೇನೆ. ಆದರಲ್ಲಿರುವಂತೆ ೭೦ ಜನ ಪುರುಷ ವೈದ್ಯರು ೨೦ ಜನ ಮಹಿಳಾ ವೈದ್ಯರು ಮೂರು ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡುತ್ತಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನೆಂದರೆ ಮೈಸೂರು ನಗರದ ಕೃಷ್ಣ ರಾಜೇಂದ್ರ, ಚೆಲುವಾಂಬ ಹಾಗೂ ಮಕ್ಕಳ ಆಸ್ಪತ್ರೆಗಳಲ್ಲಿ ಮೂರು ವರ್ಷಗಳಿಗೂ ಮೇಲ್ಪಟ್ಟು ಎಷ್ಟೆಷ್ಟು ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ಪ್ರತ್ಯೇಕ ನೋಟೀಸ್ ಕೊಟ್ಟರೆ ನಾನು ಉತ್ತರ ತರಿಸಿ ಕೊಡುತ್ತೇನೆ.

ಮುಖ್ಯ ಮಂತ್ರಿಗಳ ಪ್ರವಾಸದ ಬಗ್ಗೆ.

೧೨೫೮. ಶ್ರೀ ಎನ್. ಎಂ. ಅಡ್ಯಂತಾಯ್ಯ (ಸುರತ್ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಏಪ್ರಿಲ್ ೧೯೫೬ ರಿಂದ ೨೮ನೇ ಫೆಬ್ರುವರಿ ೧೯೫೮ರ ವರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಹೊರ ರಾಜ್ಯಗಳಲ್ಲಿ, ವಿದೇಶಗಳಲ್ಲಿ, ರಾಜ್ಯದ ರಾಜಧಾನಿಯನ್ನು ಹೊರತುಪಡಿಸಿ ರಾಜ್ಯದ ವಿವಿಧೆಡೆ ಪ್ರವಾಸ ಮಾಡಿದ ಪ್ರತ್ಯೇಕ ವಿವರಗಳನ್ನು ಒದಗಿಸುವುದೇ ?

ಆ) ಈ ಪ್ರವಾಸಗಳಿಗೆ ಪಡೆದ ಪ್ರಯಾಣ ಭತ್ಯೆ ಹಾಗೂ ಇತರ ಭತ್ಯೆಗಳ ಒಟ್ಟು ಮೊಬಲಗು ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. ೨,೪೯,೧೭೬-೮೦

ಅನುಬಂಧ

೧ನೇ ಏಪ್ರಿಲ್ ೧೯೫೬ ರಿಂದ ೨೮ನೇ ಫೆಬ್ರುವರಿ ೧೯೫೮ರ ವರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಹೊರ ರಾಜ್ಯಗಳಲ್ಲಿ, ವಿದೇಶಗಳಲ್ಲಿ, ರಾಜ್ಯದ ರಾಜಧಾನಿಯನ್ನು ಹೊರತುಪಡಿಸಿ ರಾಜ್ಯದ ವಿವಿಧೆಡೆ ಪ್ರವಾಸ ಮಾಡಿದ ಪ್ರತ್ಯೇಕ ವಿವರಗಳು.

ಹೊರ ರಾಜ್ಯಗಳಲ್ಲಿ ಮಾಡಿರುವ ಪ್ರವಾಸ

ಪ್ರವಾಸ ಮಾಡಿರುವ ದಿನಾಂಕ		ಸ್ಥಳ
೧೯೫೬		
ಏಪ್ರಿಲ್ ೧-೯	...	ದೆಹಲಿ
ಜುಲೈ ೧೭-೧೮	...	ತಿರುಪತಿ ಮತ್ತು ಕಪಲಿ
೨೭-೩೧	...	ದೆಹಲಿ
ಆಗಸ್ಟ್ ೪-೬	...	ದೆಹಲಿ ಮತ್ತು ಹೈದರಾಬಾದ್
೨೭-೨೬	...	ದೆಹಲಿ ಮತ್ತು ಮುಂಬಯಿ
ಸೆಪ್ಟಂಬರ್ ೪-೫	...	ಹೈದರಾಬಾದ್
೮-೧೩	...	ದೆಹಲಿ
೨೮-೩೦	...	ಮುಂಬಯಿ